

# ಗೋಲ್ಡನ್ ಬ್ಯಾರೆಲ್ ಕ್ಯಾಕ್ಟಸ್

ಗೋಲ್ಡನ್ ಬ್ಯಾರೆಲ್ ಕ್ಯಾಕ್ಟಸ್ ಅನ್ನು ನೇರ ಕನ್ನಡಕ್ಕೆ ಭಾಷಾಂತರಿಸಿದರೆ, 'ಚಿನ್ನದ ಪೀಪಾಯಿ ಕಳ್ಳಿ' ಎಂಬುದಾಗಿ ದ್ವಂದ್ವಾರ್ಥ ಕಲ್ಪಿಸಬಹುದಾದ ನಾಮಧೇಯ ಹುಟ್ಟಿಕೊಳ್ಳುತ್ತದೆ. ವಾಸ್ತವವಾಗಿ ಇದೊಂದು ಅಳಿವಿನಂಚಿನಲ್ಲಿರುವ ಅಪರೂಪದ ಕಳ್ಳಿ ಜಾತಿಯ ಗಿಡ. ಆಲಂಕಾರಿಕ ಸಸ್ಯವಾಗಿ ಮನೆಯ ಕೈತೋಟಗಳಲ್ಲಿ ಬೆಳೆಯಬಹುದಾದ ಕಾಡು ಜಾತಿಯ ಗಿಡವಾಗಿದ್ದು, ಇದರ ಪ್ರಮಾಣ ದಿನೇ ದಿನೇ ಕ್ಷೀಣಿಸುತ್ತಿದೆ.

ನಿಧಾನವಾಗಿ ಬೆಳೆಯುವ ಗುಣವುಳ್ಳ ಈ ಗಿಡವು ಸುಮಾರು ಮೂರು ಅಡಿ ಎತ್ತರಕ್ಕೂ, ಎರಡು ಅಡಿ ಅಗಲಕ್ಕೂ ಹರಡಿಕೊಂಡು ಆಕರ್ಷಣೀಯ ನೋಟ ಪಡೆಯುತ್ತದೆ. ವಸಂತಕಾಲದಲ್ಲಿ ಹಳದಿ ಹೂವುಗಳು ಈ ಗಿಡದ ಮೇಲ್ಭಾಗದಲ್ಲಿ ಮೈದುಂಬಿಕೊಂಡು ಅರಳುತ್ತವೆ. ಇದರ ಹಣ್ಣು ಬೀಜ ಸಹಿತ ತಿನ್ನಲು ಯೋಗ್ಯವಾಗಿದ್ದು, ಇದರಿಂದ ಜ್ಯಾಮ್ ತಯಾರಿಸಬಹುದಾಗಿದೆ. ಮರಳುಗಾಡಿನ ಇತರ ಸಸ್ಯಗಳಂತೆ ಮರಳು ತುಂಬಿಸಿದ ಜಾಡಿಗಳಲ್ಲಿ ಮನೆಯೊಳಗೆ ಇವುಗಳನ್ನು ಆಲಂಕಾರಿಕ ಸಸ್ಯವಾಗಿ ಬೆಳೆದು ಮನೆಯ ಒಳಾಂಗಣ ಸೌಂದರ್ಯ ವೃದ್ಧಿಸಿಕೊಳ್ಳಬಹುದು. ಬೀಜದಿಂದ ಸಸಿ ಮಾಡಬಹುದು. ಗಿಡ ಬೆಳೆಸಲು ಕಡಿಮೆ ನೀರು ಸಾಕಾಗುತ್ತದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ









# ಕಣ್ಮನ ಸೆಳೆಯುವ 'ಕದಂಬ'

ಕದಂಬ ಎಂದೊಡನೆ ಸಾಮಾನ್ಯವಾಗಿ ನೆನಪಾಗುವುದು ಕರ್ನಾಟಕದ ಹೆಮ್ಮೆಯ ಬನವಾಸಿಯ ಕದಂಬರು. ಒಂದು ಕಥೆಯ ಪ್ರಕಾರ ಈ ವಂಶದ ಮೂಲಪುರುಷ ತ್ರಿಲೋಚನ ಕದಂಬ ಹುಟ್ಟಿದ್ದು ಕದಂಬ ಮರದ ಕೆಳಗೆ ಎಂಬ ಪ್ರತೀತಿಯೂ ಇದೆ.

ದಕ್ಷಿಣ ಭಾರತದಲ್ಲಿ ಈ ಮರಗಳು ಹೆಚ್ಚಾಗಿ ಕಾಣುತ್ತವೆ. ಇದರ ಎಲೆಗಳು ಅಗಲ, ಹೂವುಗಳು ನೋಡಲು ಚೆಂಡಿನ ಆಕಾರದಲ್ಲಿ ಕಿತ್ತಳೆ ಬಣ್ಣದಲ್ಲಿ ಕಾಣುತ್ತವೆ. ಕ್ರಮೇಣ ಚಿನ್ನದ ಬಣ್ಣ ತಾಳುವ ಹೂಗಳು ನಂತರ ಫಲವಾಗುತ್ತವೆ. ಮಾರ್ಚ್‌ನಲ್ಲಿ ಮೊಗ್ಗು ಬಿಡಲು ಆರಂಭವಾಗಿ, ಮೇ–ಜೂನ್ ತಿಂಗಳಲ್ಲಿ ಹೂವು ಅರಳುತ್ತದೆ. ಈ ಹೂವು ಒಂದು ಪುಷ್ಪಗುಚ್ಛದಂತೆ ಕಾಣುತ್ತದೆ. ಇದು ಸಂಪೂರ್ಣವಾಗಿ ಅರಳಿದಾಗ ಸುವಾಸನೆ ಮೈಮರೆಸುವಷ್ಟು ನವಿರಾಗಿರುತ್ತದೆ. ಈ ವೃಕ್ಷಕ್ಕೆ ನಮ್ಮ ಹಿಂದೂ ಪುರಾಣದಲ್ಲಿ ವಿಶೇಷ ಸ್ಥಾನ ಇದೆ. ಅದರ ಎಲೆ, ತೊಗಟೆ, ಬೇರು, ಹೂವು ಮತ್ತು ಫಲವನ್ನು ಆಯುರ್ವೇದ ಔಷಧೋಪಚಾರದಲ್ಲೂ ಬಳಸಲಾಗುತ್ತದೆ.

–ಅಂಜನ್ ಕಾಯ್ಕಿಣಿ, ಸಾಗರ